ಭೇಟಿ ಕೊಟ್ಟಿದ್ದರು. ದೇಗುಲಗಳ ಭೇಟಿ ತಮ್ಮ ವಿರುದ್ಧದ ಕ್ಯಾಂಪೇನ್‌ಗೆ ಪ್ರತಿಕ್ರಿಯೆಯಾ? ಎನ್ನುವ ಪ್ರಶ್ನೆಗೆ – 'ನಾನು ದೇಗುಲಗಳಿಗೆ ಭೇಟಿ ಕೊಟ್ಟಿರುವುದು ಇದು ಮೊದಲೇನಲ್ಲ. ಸಿನಿಮಾಗೆ ಮೊದಲೂ ದೇಶದ ಹಲವು ಪ್ರಮುಖ ದೇವಸ್ಥಾನಗಳಿಗೆ, ಯಾತ್ರಾಸ್ಥಳಗಳಿಗೆ, ಚರ್ಚ್‌ಗಳಿಗೆ ಭೇಟಿ ಕೊಟ್ಟಿದ್ದೇನೆ. ಅದರ ಫೋಟೊಗಳು ನನ್ನ ಬಳಿ ಇವೆ. ಹೀಗಿರುವಾಗ ಸಿನಿಮಾ ವಿರುದ್ಧದ ಕ್ಯಾಂಪೇನ್‌ಗೆ ಟೆಂಪಲ್ ರನ್ ಕೌಂಟರ್ ಅನ್ನುವ ಮಾತಲ್ಲಿ ಅರ್ಥವಿಲ್ಲ' ಎಂದರು.

'ದೇವಸ್ಥಾನಗಳಿಗೆ, ಚರ್ಚ್‌ಗಳಿಗೆ ಹೋಗುವುದು ನನ್ನ ಸಹಜ ಗುಣ. ನಾನು ಭಾರತೀಯ. ಇಲ್ಲಿ ಹುಟ್ಟಿ, ಇಲ್ಲೇ ಬೆಳೆದಿದ್ದೇನೆ. ಜಾತಿ–ಧರ್ಮವನ್ನು ಸೌಹಾರ್ದವಾಗಿ ನಿರ್ವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕಿದೆ. ಅದು ನನ್ನಿಂದ ಸಾಧ್ಯವಿಲ್ಲ ಅನ್ನುವುದಾದರೆ ನಾನು ಈ ದೇಶದಲ್ಲಿರಲು ಅರ್ಹನಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಅನ್ನೋ ಭೇದಭಾವ ನನ್ನಲ್ಲಿಲ್ಲ. ಮತ್ತೊಂದು ಧರ್ಮದ ದ್ವೇಷಿಯೂ ನಾನಲ್ಲ' ಎನ್ನುವ ಅವರು, 'ತಾನೊಬ್ಬ ಸೆಕ್ಯುಲರ್' ಎಂದು ಹೆಮ್ಮೆಯಿಂದ ಹೇಳಿಕೊಂಡರು. 'ವೈವಿಧ್ಯದಿಂದ ಕೂಡಿದ ನನ್ನ ದೇಶದ ಸೌಂದರ್ಯವನ್ನು ಕಣ್ತುಂಬಿಕೊಳ್ಳುವ ಹಂಬಲ ನನ್ನದು. ಬನಾರಸ್‌ಗೆ ಆಶೀರ್ವಾದ ಕೋರಿ ಈಗ ದೇವಸ್ಥಾನ ಸುತ್ತುತ್ತಿದ್ದೇನೆ ಅಷ್ಟೇ' ಎನ್ನುವ ಮಾತನ್ನೂ ಸೇರಿಸಿದರು.

ಸಿನಿಮಾದಲ್ಲಿ ನಟನೆಗಾಗಿ ಬಣ್ಣ ಹಚ್ಚುವ ಮೊದಲು ಮನೆಯಲ್ಲಿ ವಾಗ್ಯುದ್ಧವೇ ನಡೆದುದನ್ನು ಜೈದ್ ನೆನಪಿಸಿಕೊಳ್ಳುತ್ತಾರೆ. 'ಬಣ್ಣ ಹಚ್ಚುವ ವಿಚಾರಕ್ಕೆ ನನ್ನ ಮನೆಯಲ್ಲಿ ಕುರುಕ್ಷೇತ್ರವೇ ನಡೆದಿತ್ತು. ಅಪ್ಪ ಸೇರಿದಂತೆ ಮನೆಯಲ್ಲಿ ಯಾರಿಗೂ ನಾನು ನಟನಾಗುವುದು ಇಷ್ಟವಿರಲಿಲ್ಲ. ಅದೇ ಕಾರಣಕ್ಕೆ ಸಾಕಷ್ಟು ಹಟ ಮಾಡಿ, ಜಗಳ ಮಾಡಿ, ಮನೆ ಬಿಟ್ಟು ಹೋಗಿದ್ದೆ. ಫೈನಲಿ ನಮ್ಮಪ್ಪ, 'ನೀನು ಸಿನಿಮಾ ಮಾಡುವುದು ನನಗೆ ಒಂದು ಪೈಸೆಯಷ್ಟೂ ಆಸೆ ಇಲ್ಲ. ನಾನು ಯಾವ ರೀತಿಯ ಸಹಾಯವನ್ನೂ ನಿನಗೆ ಮಾಡುವುದಿಲ್ಲ' ಎಂದು ಹೇಳಿಯೇ ನಟನೆಗೆ ಒಪ್ಪಿಗೆ ಕೊಟ್ಟರು' ಎನ್ನುವ ಜೈದ್, ಅಪ್ಪನ ಗ್ರೀನ್ ಸಿಗ್ನಲ್ ಸಿಕ್ಕ ಕೂಡಲೇ ಮುಂಬೈನ್ ಅನುಪಮ್ ಖೇರ್ ನಟನಾಶಾಲೆಗೆ ಸೇರಿಕೊಂಡಿದ್ದನ್ನು ನೆನಪಿಸಿಕೊಂಡರು.

### ಅಣ್ಣಾವ್ರ ಮಾತೇ ಸ್ಫೂರ್ತಿ!

ಶಾಲಾ ದಿನಗಳಿಂದಲೂ ನಟನೆ, ಡಾನ್ಸ್, ಫೈಟ್ ಬಗ್ಗೆ ಜೈದ್ ಅವರಿಗೆ ಆಸಕ್ತಿ ಇತ್ತಂತೆ. ರಾಜ್‌ಕುಮಾರ್ ಹಾಗೂ ತಮ್ಮ ಕುಟುಂಬದ ನಡುವೆ ಸ್ನೇಹಸಂಬಂಧ ಇದ್ದುದಾಗಿ ಹೇಳುವ ಅವರು, ಬಾಲ್ಯದ ಘಟನೆಯೊಂದನ್ನು ನೆನಪಿಸಿಕೊಳ್ಳುತ್ತಾರೆ. 'ಜಮೀರ್ ಅವರೇ, ನಿಮ್ಮ ಮಗನ ಕಣ್ಣುಗಳು ತುಂಬಾ ಚೆನ್ನಾಗಿವೆ. ಅವನ ಕಣ್ಣುಗಳಿಗೆ ಜನರನ್ನು ಸೆಳೆಯುವ ಗುಣವಿದೆ. ಒಬ್ಬ ನಿಜವಾದ ಕಲಾವಿದನ ಕಣ್ಣುಗಳು ಮಾತನಾಡುವಂತೆ ಇರುತ್ತವೆ. ಅಂಥ ಕಣ್ಣುಗಳನ್ನು ಹೊಂದಿರುವ ನಿಮ್ಮ ಮಗನನ್ನು ಕಲಾವಿದನನ್ನಾಗಿ ಮಾಡಿ' ಎಂದೊಮ್ಮೆ ರಾಜ್‌ಕುಮಾರ್ ಹೇಳಿದ್ದರಂತೆ. ಆ ಮಾತೇ ಜೈದ್ ಅವರಲ್ಲಿ ಸಿನಿಮಾದ ಬೀಜ ಮೊಳೆಯಲು ನಾಂದಿಯಾಯಿತು.

ಅಂದಹಾಗೆ, ಜಯತೀರ್ಥ ನಿರ್ದೇಶನದ 'ಬನಾರಸ್' ಚಿತ್ರದ ಶೇ. 90ರಷ್ಟು ಭಾಗದ ಚಿತ್ರೀಕರಣ ಬನಾರಸ್ ಸುತ್ತಮುತ್ತಲೇ ನಡೆದಿದೆ. ಅಲ್ಲಿನ 84 ಘಾಟ್‌ಗಳಲ್ಲಿ ಚಿತ್ರೀಕರಣ ನಡೆಸಿರುವುದು ವಿಶೇಷ. 'ತನ್ನ ಸಿನಿಮಾ ಈಗಾಗಲೇ ಗೆದ್ದಿದೆ' ಎಂಬ ಸಂಭ್ರಮದಲ್ಲಿರುವ ಜೈದ್ ಅವರಿಗೆ, ಸಿನಿಮಾರಂಗದಲ್ಲಿ ತಾವು ಸಾಗಬೇಕಾದ ದಾರಿಯ ಮೊದಲ ಹೆಜ್ಜೆ ಇದೆನ್ನುವ ಅರಿವೂ ಇದೆ. ■



# ರಾಣಾ ಬರುವನೆಂದು?



'ಪಡ್ಡೆಹುಲಿ' ಸಿನಿಮಾದ ಮೂಲಕ ಗಾಂಧಿನಗರ ಪ್ರವೇಶಿಸಿದ್ದ ಶ್ರೇಯಸ್, ಈಗ 'ರಾಣಾ' ಆಗಿ ಮತ್ತೊಮ್ಮೆ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ನ. 11ರಂದು ಚಿತ್ರವನ್ನು ತೆರೆಕಾಣಿಸಲು 'ರಾಣಾ' ಬಳಗ ಸಿದ್ಧತೆ ನಡೆಸುತ್ತಿದೆ.

ನಟ ಶ್ರೇಯಸ್, ನಿರ್ಮಾಪಕ ಕೆ. ಮಂಜು ಅವರ ಪುತ್ರ. ಗಾಂಧಿನಗರದಲ್ಲಿ ಅಪ್ಪನಿಗೆ ದೊಡ್ಡ ಹೆಸರಿದ್ದರೂ ಮಗನ ಸಿನಿಜರ್ನಿ ಹೂವಿನ ಹಾಸಿಗೆಯೇನೂ ಆಗಿಲ್ಲ. 'ಪಡ್ಡೆಹುಲಿ' ಸಿನಿಮಾದ ಬಗ್ಗೆ ಮಾಧ್ಯಮಗಳಲ್ಲಿ ಒಳ್ಳೆಯ ಮಾತುಗಳು ಬಂದರೂ, ಅದರ ಪರಿಣಾಮ ಗಲ್ಲಾಪೆಟ್ಟಿಗೆಯಲ್ಲಿ ಕಾಣಿಸಲಿಲ್ಲ. ಆಗ ದೊರೆಯದಿದ್ದ ಶ್ರೇಯಸ್ಸನ್ನು 'ರಾಣಾ' ಮೂಲಕ ಪಡೆಯಲು ಹಾತೊರೆಯುತ್ತಿದ್ದಾರೆ ಶ್ರೇಯಸ್. ಧ್ರುವ ಸರ್ಜಾ ಅವರು ಟ್ರೇಲರ್ ಬಿಡುಗಡೆ ಮಾಡಿ, ತಮ್ಮ ಬಗ್ಗೆ ಒಳ್ಳೆಯ ಮಾತುಗಳನ್ನಾಡಿರುವುದು ಶ್ರೇಯಸ್‌ರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

'ರಾಣಾ' ಚಿತ್ರಕ್ಕಾಗಿ ಶ್ರೇಯಸ್ ಅಕ್ಷರಶಃ ಬೆವರು ಸುರಿಸಿದ್ದಾರೆ. ಸಿನಿಮಾಕ್ಕಾಗಿ ಸಾಕಷ್ಟು ತೂಕ ಇಳಿಸಿಕೊಂಡಿದ್ದಾರೆ. ಡಾನ್ಸ್ ಕಲಿಯುವ ಮೂಲಕ ನಟನಾಗಿ ತಮ್ಮ ದೇಹಭಾಷೆಯನ್ನು ಸುಧಾರಣೆಗೆ ಒಡ್ಡಿಕೊಂಡಿದ್ದಾರೆ. ಈ ಮೊದಲು ತಮ್ಮ ಹೀರೊ ಎಂದು ಒಪ್ಪಿಕೊಳ್ಳಲು ನಿರಾಕರಿಸಿದವರು ಬೆರಗಾಗುವಂತೆ ಶ್ರೇಯಸ್ ತಮ್ಮನ್ನು ಬದಲಾವಣೆಗೆ ತೆರೆದುಕೊಂಡಿದ್ದಾರೆ. ಅವರ ಈ ಪರಿವರ್ತನೆಯನ್ನು ಗಮನಿಸಿದರೆ, 'ಸಿನಿಮಾನೆ ನನ್ನ ಉಸಿರು' ಎನ್ನುವ ಅವರ ಹೇಳಿಕೆಯನ್ನು ಲಘುವಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ.

ರೀಷ್ಮಾ ನಾಣಯ್ಯ ಚಿತ್ರದ ನಾಯಕಿ. ಯಶಸ್ಸಿನ ಹುಡುಕಾಟದಲ್ಲಿ ಅವರಿಗೆ ಕೂಡ 'ರಾಣಾ' ತಮ್ಮ ಕೈಹಿಡಿಯುವ ನಂಬಿಕೆಯಿದೆ. 'ರಾಣಾ'ದ ತಾಂತ್ರಿಕ ಬಳಗ ಕೂಡ ಪ್ರತಿಭಾವಂತರನ್ನು ಒಳಗೊಂಡಿದೆ. ಚಂದನ್ ಶೆಟ್ಟಿ ಸಂಗೀತ, ಶೇಖರ್ ಚಂದ್ರು ಛಾಯಾಗ್ರಹಣ ಚಿತ್ರಕ್ಕಿದೆ. ■